ಅ) ಪ್ರೌಢಶಾಲೆಗಳಲ್ಲಿ ೭ ವರ್ಷ ಸೇವೆ ಸಲ್ಲಿಸಿದ ದೈಹಿಕ ಶಿಕ್ಷಕರಿಗೆ ಸೀನಿಯರ್ ಗ್ರೇಡ್-1ಹುದ್ದೆಯನ್ನು ಸೃಷ್ಟಿಸಿ ಬಡ್ತಿ ನೀಡಲು ಸರ್ಕಾರ ತೀರ್ಮಾನಿಸಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ನಿಯಮಾವಳಿಗಳನ್ನು ರೂಪಿಸಲು ತೆಗೆದುಕೊಂಡ ಕ್ರಮಗಳು ಯಾವುವು ?

ಇ) ಸದರಿ ಪ್ರಯೋಜನವನ್ನು ದೈಹಿಕ ಶಿಕ್ಷಕರಿಗೂ ಒದಗಿಸಲು ಉದ್ದೇಶಿಸಿದೆಯೇ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಹೌದು-

ಆ) ಗ್ರೇಡ್-1ದೈಹಿಕ ಶಿಕ್ಷಕರಿಗೆ ಹಿರಿಯ ಗ್ರೇಡ್-1ಶ್ರೇಣಿಗೆ ಮುಂಬಡ್ತಿ ನೀಡಲು ಕರಡು ನಿಯಮಗಳನ್ನು ರೂಪಿಸಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಕೇಳಲಾಗಿದ್ದು ಈ ಸಂಬಂಧ ಬಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಶೀಲಿಸಲಾಗುತ್ತಿದೆ. ಗ್ರೇಡ್-2 ದೈಹಿಕ ಶಿಕ್ಷಕರಿಗೆ ಹಿರಿಯ ಗ್ರೇಡ್-2ಮುಂಬಡ್ತಿ ನೀಡುವ ಬಗ್ಗೆ ನಿಯಮಗಳನ್ನು ರೂಪಿಸಲಾಗುತ್ತಿದೆ.

ಇ) ಹೌದು-

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಕರಿಗೆ ಒಂದು ಹುದ್ದೆಯನ್ನು ಸರ್ಕಾರ ಕೊಡುತ್ತದೆನ್ನುವ ತೀರ್ಮಾನವಾಗಿದೆ. ಈಗಾಗಲೆ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿರತಕ್ಕ ಸಮಿತಿ ತೀರ್ಮಾನ ಕೈಗೊಂಡು ಒಂದು ವರ್ಷವಾಯಿತು. ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಶೀಲನೆ ಮಾಡಲಾಗುತ್ತದೆಂದರೆ, ನೀವು ಏಕೆ ಮೀನಾಮೇಷ ಮಾಡುತ್ತಿದ್ದೀರಿ ಎಂಬುದು ಗೊತ್ತಾಗುತ್ತಿಲ್ಲ? ಕಳೆದ ಬಾರಿ ರಾಷ್ಟ್ರೀಯ ಕ್ರೀಡಾ ಕೂಟ ನಡೆದಾಗ ದೈಹಿಕ ಶಿಕ್ಷಕರು ಮುಷ್ಕರ ಹೂಡಿದ್ದರು. ಆ ಸಂದರ್ಭದಲ್ಲಿ ಕೊಟ್ಟಂತಹ ಉತ್ತರ ಕೂಡ ಇದೆ. ಅದರ ಜೊತೆಗೆ ಸರ್ಕಾರ ಸಿಆಸುಇ 85ಎಸ್ಆರ್ಇ 97ದಿನಾಂಕ 12-6-98ರ ಪ್ರಕಾರ ಸೀನಿಯರ್ ಗ್ರೇಡ್‌ಗೆ ಬಡ್ತಿ ಕೊಡಲಾಗುವುದೆಂದು ಪ್ರಕಟಿಸಿದ್ದೀರಿ. ಅಂತಿಮವಾಗಿ ನಿಯಮ ಪ್ರಕಟಿಸುವುದಕ್ಕೆ ಆಡಳಿತಾತ್ಮಕ ಇಲಾಖೆಯಿಂದ ಶಿಕ್ಷಣ ಇಲಾಖೆ ಮಾಹಿತಿ ತರಿಸಿಕೊಳ್ಳುವುದಕ್ಕೆ ಏಕೆ ವಿಳಂಬ ನೀತಿಯನ್ನು ಅನುಸರಿಸುತ್ತಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇ ಗೌಡ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಹಲವಾರು ಸಾರಿ ಸಂಬಂಧಪಟ್ಟ ಇಲಾಖೆ ಮತ್ತು ಸಿಆಸುಇ ಜೊತೆ ತೀರ್ಮಾನವಾಗಿದೆ. ಇನ್ನು ಒಂದು ಒಂದೂವರೆ ತಿಂಗಳೊಳಗೆ ಅದನ್ನು ಜಾರಿಗೆ ತರುವುದಕ್ಕೆ ಈಗಾಗಲೇ ವ್ಯವಸ್ಥೆಯಾಗಿದೆ.

ಅಧ್ಯಕ್ಷರು : ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ, ಜಗದೀಶ್‌ತಿಮ್ಮಣ್ಣಗೌಡ ಪಾಟೀಲ್, ಎನ್. ಯೋಗೀಶ್‌ಭಟ್ ಮಾನ್ಯ ಸದಸ್ಯರುಗಳು ಗೈರು ಹಾಜರಾಗಿದ್ದಾರೆ. ಪ್ರಶ್ನೋತ್ತರವೇಳೆ ಮುಗಿಯಿತು.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು.

ಶ್ರೀ ಎಂ. ಪಿ. ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಸಚಿವರು) ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ 16ನೆಯ ಪಟ್ಟಿಯಲ್ಲಿರುವ 46ಪ್ರಶ್ನೆಗಳ ಪೈಕಿ 38ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇವೆ.